ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

ಸಿ.ಸಿ.ನಂ.**795/2026.**

ದಿನಾಂಕ:**06-07-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ವಿದ್ಯಾ ಕೆ ಜಿ | ಚಾಸಾ -15 |
| ತಂದೆಯ ಹೆಸರು | ವಿಶ್ವನಾಥ | ಪ್ರಾಸಾ -5 |
| ವಯಸ್ಸು (ವರ್ಷಗಳಲ್ಲಿ) | 31 | |
| ಉದ್ಯೋಗ | ಪಿ ಎಸ್ ಐ | |
| ವಾಸ | ಕಡೂರು | |

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:

ನಾನು ದಿ:07.09.2025 ರಿಂದ ಇಲ್ಲಿಯವರೆಗೆ ಕಡೂರು ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ:20.02.2026 ರಂದು ಮುಂದಿನ ತನಿಖೆಗೆಂದು ಚಾಸಾ 14 ರವರಿಂದ ಕಡತವನ್ನು ಪಡೆದಿರುತ್ತೇನೆ. ದಿ:22.02.2026 ರಂದು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ 12.20 ರಿಂದ 1.20 ರ ವರೆಗೂ ಚಾಸಾ 1, 2, 3 ರವರ ಸಮಕ್ಷಮ ನಿಪಿ 2 ರಂತೆ ಮಹಜರ್ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ2 ಬಿ ಎಂದು ಗುರುತಿಸಲಾಯಿತು. ಸದರಿ ವೇಳೆಯಲ್ಲಿ ನಿಪಿ 3 ರಿಂದ 7 ಪೋಟೋ ತೆಗೆಯಲಾಗಿದೆ. ಸದರಿ ವೇಳೆ ಸ್ಥಳದಲ್ಲಿ ನಕ್ಷೆ ತಯಾರಿಸಿರುತ್ತೇನೆ, ಅದನ್ನು ನಿಪಿ 15, ಸಾಕ್ಷಿಯ ಸಹಿಯನ್ನು ನಿಪಿ 15 ಎ ಎಂದು ಗುರುತಿಸಲಾಯಿತು.

ದಿ:07.03.2026 ರಂದು ಆರೋಪಿಯ ಪತ್ತೆ ಕುರಿತು ಚಾಸಾ 7 ರಿಂದ 9 ರವರನ್ನು ಕಳುಹಿಸಿರುತ್ತೇನೆ. ದಿ:11.03.2026 ರಂದು ಬೆಳಗ್ಗೆ 9 ಗಂಟೆಗೆ ಇಬ್ಬರು ಆರೋಪಿತರನ್ನು ಹಾಜರುಪಡಿಸಿರುತ್ತಾರೆ, ಸದರಿ ಹಾಜರುಪಡಿಸಿದ ವರದಿಯನ್ನು ನಿಪಿ 16 ಎಂದು ಸಾಕ್ಷಿಯ ಸಹಿಯನ್ನು ನಿಪಿ 16 ಎ ಎಂದು ಗುರುತಿಸಲಾಯಿತು.

ದಿ:22.02.2026 ರಂದು ಬೆರಳು ಮುದ್ರೆ ಘಟಕದಿಂದ ವರದಿ ಪಡೆದಿರುತ್ತೇನೆ. ಸದರಿ ನಿವೇದನೆ ಮತ್ತು ವರದಿಯನ್ನು ನಿಪಿ 17, 18 ಎಂದು ಸಾಕ್ಷಿಯ ಸಹಿಯನ್ನು ನಿಪಿ 17 ಎ, 18 ಎ ಎಂದು ಗುರುತಿಸಲಾಯಿತು.

ದಿ:11.03.2026 ರಂದು 11.30 ರಿಂದ 12.40 ರ ವರೆಗೂ ಠಾಣೆಯಲ್ಲಿ ಚಾಸಾ 4, 5, 12 ರವರ ಸಮಕ್ಷಮ ನಿಪಿ 10 ರಂತೆ ಅಮಾನತ್ತು ಮಹಜರ್ ಮಾಡಿರುತ್ತೇನೆ. ಸದರಿ ಅಮಾನತ್ತು ವೇಳೆ ನಿಪಿ 8 ರಲ್ಲಿ ಕಾಣುವ ಒಡವೆ ಅಮಾನತ್ತು ಪಡಿಸಿಕೊಂಡಿದ್ದು, ನಿಪಿ 11 ರಂತೆ ಪೋಟೊ ತೆಗೆಯಲಾಗಿದೆ. ನಿಪಿ 10 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 10 ಎ ಎಂದು ಗುರುತಿಸಲಾಯಿತು.

ಆರೋಪಿಗಳು ತಾವು ಕಳ್ಳತನ ಮಾಡಿದ ಸ್ಥಳ ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ ಆರೋಪಿತರು ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 1.05 ರಿಂದ 1.40 ರ ವರೆಗೂ ಚಾಸಾ 1, 4, 5, 9, 10 ಹಾಗೂ ಆರೋಪಿತರ ಸಮಕ್ಷಮ ನಿಪಿ 12 ರಂತೆ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ12 ಸಿ ಎಂದು ಗುರುತಿಸಲಾಯಿತು. ಸದರಿ ವೇಳೆಯಲ್ಲಿ ಆರೋಪಿತರು ತೋರಿಸಿದ ಸ್ಥಳದ ನಕಾಶೆ ತಯಾರಿಸಿರುತ್ತೇನೆ, ಅದನ್ನು ನಿಪಿ 19 ಎಂದು ಸಾಕ್ಷಿಯ ಸಹಿಯನ್ನು ನಿಪಿ19 ಎ ಎಂದು ಗುರುತಿಸಲಾಯಿತು. ಸದರಿ ವೇಳೆಯಲ್ಲಿ ನಿಪಿ 13, 14 ರ ಪೋಟೋ ತೆಗೆಯಲಾಯಿತು.

ದಿ:12.03.2026 ಕೃತ್ಯ ನಡೆದ ಸ್ಥಳದ ದಾಖಲೆ ನೀಡುವಂತೆ ಚಾಸಾ 13 ರವರಿಗೆ ಮನವಿ ಸಲ್ಲಿಸಿರುತ್ತೇನೆ. ಸದರಿ ಮನವಿಯನ್ನು ನಿಪಿ 20, ಸಹಿಯನ್ನು ನಿಪಿ20 ಎ ಎಂದುಗ ುರುತಿಸಲಾಯಿತು. ಅದರಂತೆ ಚಾಸಾ 13 ರವರು ಕೃತ್ಯ ನಡೆದ ಸ್ಥಳದ ಡಿಮ್ಯಾಂಡ್ ಎಕ್ಸ್‌ಟ್ರ್ಯಾಕ್ಟ್ ನೊಂದಿಗೆ ಮರುಮನವಿಯನ್ನು ಸಲ್ಲಿಸಿದ್ದು ಅದನ್ನು ನಿಪಿ 21 ಮತ್ತು 22 ಎಂದು ಸಾಕ್ಷಿಯ ಸಹಿಯನ್ನು ನಿಪಿ 21 ಎ, 22 ಎ ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಆರೋಪಿತರೇ ಆ ದಿನ ಬಂಧಿಸಿದ ಆರೋಪಿತರೇ ಆಗಿರುತ್ತಾರೆ.

ನಂತರ, ದಿ:20.03.2026 ರಂದು ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ**,** ಪಾಟೀ ಸವಾಲನ್ನು ಮಾಡಲು ಮಾನ್ಯ ಸ ಸ ಅ ರವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**)**

<u>ಪಾಟೀಸವಾಲುಃ ಮಾನ್ಯ ಸ ಸ ಅ ರವರಿಂದಃ</u>

ದಿಃ12.03.2026 ರಂದು ಚಾಸಾ 1 ರವರ ಮರು ಹೇಳಿಕೆ ಮತ್ತು 7 ರಿಂದ 10 ರವರ  ಹೇಳಿಕೆ ಪಡೆದಿರುತ್ತೇನೆ ಎಂದರೆ ಸರಿ.

<u>ಪಾಟೀಸವಾಲುಃ ಆರೋಪಿ ಪರ ಶ್ರೀ.ಹೆಚ್. ಎನ್. ಎಸ್   ವಕೀಲರಿಂದಃ</u>

ನಾನು ಕೃತ್ಯ ಸ್ಥಳಕ್ಕೆ ಮಹಜರಿಗೆ ಹೋಗುವ ಪೂರ್ವದಲ್ಲಿ ಪಂಚರಿಗೆ ನೋಟೀಸು ನೀಡಿರುತ್ತೇನೆ. ಸದರಿ ನೋಟೀಸ್ ಅನ್ನು ಕೃತ್ಯ ನಡೆದ ಸ್ಥಳದಲ್ಲಿ ಮಧ್ಯಾಹ್ನ 12.15 ಕ್ಕೆ ನೋಟೀಸು ನೀಡಿರುತ್ತೇನೆ.  ಸದರಿ ನೋಟೀಸ್ ಅನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ ನಾನು ಪಂಚರಿಗೆ ನೋಟೀಸು ನೀಡಿಲ್ಲವೆಂದರೆ ಸರಿಯಲ್ಲ. ಸ್ಥಳ ಮಹಜರ್ ಮಾಡಿದ ಸ್ಥಳದ ಅಕ್ಕ-ಪಕ್ಕದಲ್ಲಿ ಬೇರೆ ಮನೆಗಳು ಇವೆ ಎಂದರೆ ಸರಿ. ಪಕ್ಕದ ಮನೆಯವರಿಂದ ಹೇಳಿಕೆ ಪಡೆದಿರುತ್ತೀರಾ ಎಂದರೆ ಸದರಿಯವರೇ ಮಹಜರ್ ಸಾಕ್ಷಿದಾರರಾಗಿರುತ್ತಾರೆ. ಪೋಟೋದಲ್ಲಿ ಇರುವವರು ಪಕ್ಕದ ಮನೆಯವರಾಗಿರುತ್ತಾರೆ.

ಸ್ಥಳ ಮಹಜರ್ ಮಾಡಿದ ಮನೆ ಚಾಸಾ 1 ರವರ ತಾಯಿ ವಿಮಲಮ್ಮ ರವರ ಮನೆ. ಸದರಿ ವಿಮಲಮ್ಮ ರವರಿಗೆ ಮಹಜರಿಗೆ ನೋಟೀಸ್ ನೀಡಿಲ್ಲ, ಸಾಕ್ಷಿ ಮುಂದುವರೆದು ಅವರಿಗೆ ಅನಾರೋಗ್ಯವಿದ್ದದ್ದರಿಂದ ಚಾಸಾ 1 ರವರೇ ಬಂದಿರುತ್ತಾರೆ. ಮಹಜರ್ ಪೋಟೋದಲ್ಲಿನ ಮನೆ ವಿಮಲಮ್ಮ ರವರ ಮನೆಯಲ್ಲವೆಂದರೆ ಚಾಸಾ 13 ರವರು ಸದರಿ ಮನೆಯು ಖೈರುನ್ನಿಸಾ ಎಂಬುವವರ ಹೆಸರಿನಲ್ಲಿ ಇದೆ ಎಂದು ನಿಪಿ 22 ರಂತೆ ದಾಖಲೆ ನೀಡಿರುತ್ತಾರೆ ಎನ್ನುತ್ತಾರೆ. ನಿಪಿ 22 ರಲ್ಲಿ ನೇತ್ರಾವತಿ ಬಿನ್ ನಾಗಯ್ಯ ಎಂದು ಹೆಸರು ಇದೆ ಎಂದರೆ ಎರಡೂ ಹೆಸರು ಇದೆ ಎನ್ನುತ್ತಾರೆ. ಆ ಬಗ್ಗೆ ನಾನು ಸದರಿ ಮಾಲೀಕರಿಗೆ ನೋಟೀಸು ನೀಡಿಲ್ಲ. ವಿಮಲಮ್ಮ ರವರ ಮನೆಯಲ್ಲಿ ಯಾವುದೇ ಕಳ್ಳತನವಾಗಿಲ್ಲ ಮತ್ತು ವಿವಾದಿತ ಮನೆ ವಿಮಲಮ್ಮ ರವರ ಮನೆಯಲ್ಲ ಎಂದರೆ ಸರಿಯಲ್ಲ. ಮಹಜರಿನಲ್ಲಿ ಚೆಕ್ಕುಬಂಧಿ ಮತ್ತು ಅಸೆಸ್ ಮೆಂಟ್ ಸಂಖ್ಯೆ ನಮೂದಿಸಿಲ್ಲ. ಮಹಜರಿನಲ್ಲಿನ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ನಾನೇ ಹೇಳಿ

ಮಾಡಿಸಿದ್ದೇನೆ ಎನ್ನುತ್ತಾರೆ. ಯಾವ ಯಾವ ಒಡವೆಗಳು ಕಳ್ಳತನವಾಗಿದೆ ಎಂದು ಹೇಳಲು ಸಾದ್ಯವಿಲ್ಲವೆಂದರೆ ಸರಿಯಲ್ಲ. ನನ್ನೊಂದಿಗೆ ಬೆರಳಚ್ಚು ಮುದ್ರೆ ತಜ್ಞರು ಬಂದಿರಲಿಲ್ಲವೆಂದರೆ ಸರಿ. ಸದರಿ ಬೆರಳಚ್ಚು ತಜ್ಞರು ಸ್ಥಳಕ್ಕೆ ಬಂದು ಬೆರಳಚ್ಚು ಮುದ್ರೆ ತೆಗೆದುಕೊಂಡ ಬಗ್ಗೆ ಯಾವುದೇ ವರದಿ ಮಾಡಿಲ್ಲ ಎಂದರೆ ಸಾಕ್ಷಿಯು ವರದಿ ಮಾಡಿ ಹೇಳಿಕೆ ಪಡೆದಿರುತ್ತೇನೆ ಎನ್ನುತ್ತಾರೆ. ಸದರಿ ಪೋಟೋದಲ್ಲಿ ಕಾಣುವ ಯಾವ ಬಣ್ಣದ್ದು ಎಂದು ಮಹಜರಿನಲ್ಲಿ ನಮೂದಿಸಿಲ್ಲವೆಂದರೆ ಸರಿಯಲ್ಲ.

ನಿಪಿ 5 ರ ಪೋಟೋದಲ್ಲಿ ಸೀಕ್ರೆಟ್ ಲಾಕ್ ಓಪನ್ ಆಗಿಲ್ಲವೆಂದರೆ ಸರಿ. ದಿಃ11.03.2026 ರಂದು ಬೆಳಗ್ಗೆ 9 ಗಂಟೆಗೆ ಆರೋಪಿತರನ್ನು ನಾನು ದಸ್ತಗಿರಿ ಮಾಡಿರುತ್ತೇನೆ. ಆರೋಪಿತರನ್ನು ದಸ್ತಗಿರಿ ಮಾಡಿದಾಗ ಅವರ ಬಳಿ ಯಾವುದೇ ವಸ್ತು ಇರಲಿಲ್ಲವೆಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಅವರ ಬಳಿ ಒಡವೆಗಳು ಇತ್ತು ಎನ್ನುತ್ತಾರೆ. ಆರೋಪಿಗಳ ಬಳಿ ಯಾವುದೇ ವಸ್ತುಗಳು ಇಲ್ಲದಿದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ 11 ರಲ್ಲಿ ಕಾಣುವಂತೆ ಆರೋಪಿಗಳ ಬಳಿ ಯಾವುದೇ ಒಡವೆಗಳು ಇಲ್ಲ ಎಂದರೆ ನಂತರ ತೆಗೆದುಕೊಟ್ಟಿದ್ದಾರೆ ಎನ್ನುತ್ತಾರೆ. ನಿಪಿ 8 ರಲ್ಲಿ ಆರೋಪಿಗಳು ಅಥಾವ ನಾನು ಇಲ್ಲವೆಂದರೆ ಸರಿ. ನಿಪಿ 8 ನ್ನು ಠಾಣೆಯಲ್ಲಿ ತೆಗೆದಿಲ್ಲವೆಂದರೆ ಸರಿಯಲ್ಲ. ಅಮಾನತ್ತು ಮಹಜರ್ ಅನ್ನು 11.30 ರಿಂದ 12.40 ರ ವರೆಗೂ ಮಾಡಿರುತ್ತೇನೆ. ಚಾಸಾ 4, 5 ರವರಿಗೂ ಕೂಡ ಅಮಾನತ್ತು ಪಂಚನಾಮೆ ಹಾಜರಾಗಲು ನೋಟೀಸು ನೀಡಿರಲಿಲ್ಲವೆಂದರೆ ಸರಿಯಲ್ಲ.

ಆರೋಪಿಗಳೊಂದಿಗೆ ಸ್ಥಳಕ್ಕೆ ಮ.1 ಗಂಟೆಗೆ ಹೋಗಿರುತ್ತೇವೆ. ನಿಪಿ 14 ರ ಪೋಟೋದಲ್ಲಿ ಕಾಣುವ ಬೀರು ಮತ್ತು ನಿಪಿ 6 ರಲ್ಲಿನ ಬೀರು ಬೇರೆ ಬೇರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸೈಡಿನಿಂದ ತೆಗೆಯಲಾಗಿದೆ ಎನ್ನುತ್ತಾರೆ. ನಿಪಿ 14 ಮನೆ ಹಾಲ್ ನಲ್ಲಿ ತೆಗೆದ ಪೋಟೋವಲ್ಲ ಎಂದರೆ ಸರಿಯಲ್ಲ.

ನಿಪಿ 14 ರಲ್ಲಿ ಕಾಣುವ ಬೀರುವನ್ನು ಚಾಸಾ 1 ರವರು ಮಹಜರ್ ಕಾಲದಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ಕಳ್ಳತನಕ್ಕು ಆರೋಪಿತರಿಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ. ನಾನು ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು

ಸ್ಥಳ ಮತ್ತು ಅಮಾನತ್ತು ಮಹಜರ್ ಜರುಗಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳನ್ನು ದಸ್ತಗಿರಿ ಮಾಡಿದಾಗ ಅವರು ಟಿ-ಶರ್ಟ ಧರಿಸಿದ್ದರು. ನಿಪಿ 22 ರ ಅಸೆಸ್ ಮೆಂಟ್ ವಿಮಲಮ್ಮ ರವರಿಗೆ ಸಂಬಂಧಿಸಿರದೆ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆ ಪಡೆಯದೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ತನಿಖೆಯಿಂದ ಆರೋಪಿಗಳ ವಿರುದ್ಧ ಆರೋಪ ಸಾಭೀತಾಗಿಲ್ಲದಿದ್ದರು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮಹಜರ್ ಕಾಲದಲ್ಲಿ ತಯಾರಿಸಿದ್ದೇನೆ ಎಂದು ಹೇಳುವ ನಕ್ಷೆಗಳನ್ನು ಠಾಣೆಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.